ಆ) ಬಂದಿದೆ.

ಇ) ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರು ಪುರಸಭೆ ಸಿಂಧನೂರು ಇವರಿಗೆ ಬರ ಪರಿಹಾರ ಕಾಮಗಾರಿಯಡಿಯಲ್ಲಿ ಹಣ ಬಿಡುಗಡೆ ಮಾಡಿದ್ದು ಪುರಸಭೆಯವರು ಹಳ್ಳಕ್ಕೆ ತಾತ್ಪರ್ತಿಕ ಒಡ್ಡು ಹಾಕಿದ್ದರು ಆದರೆ ಬಹಳಷ್ಟು ನೀರು ಬಂದಿರುವುದರಿಂದ ಒಡ್ಡು ಒಡೆದು ನೀರಿನ ತೊಂದರೆಯಾಗಿತ್ತು. ಆಗಲೆ ಪುರಸಭೆಯವರು ದುರಸ್ತಿ ಕೆಲಸ ಮಾಡಿ ನೀರು ಸರಬರಾಜು ಮಾಡಿದ್ದಾರೆ. ಸಧ್ಯದಲ್ಲಿ ಪುರಸಭೆಯವರು ನೀರು ಸರಬರಾಜು ನಿರ್ವಹಣೆ ಜವಾಬ್ದಾರಿ ಹೊತ್ತಿರುವುದರಿಂದ ಅವರೇ ನೀರು ಸರಬರಾಜು ಮಾಡುತ್ತಿರುವವರು.

ಸಿಂಧನೂರು ನಗರದ ನೀರು ಸರಬರಾಜಿನ ಅಸಮರ್ಪಕತೆ ನಿವಾರಿಸಲು ರೂ.250.00 ಲಕ್ಷಗಳು ಒಂದು ಯೋಜನೆಯು ಪ್ರಗತಿಯಲ್ಲಿದ್ದು ಈ ಯೋಜನೆಯು ಪೂರ್ಣಗೊಂದಾಗ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗುತ್ತದೆ.

ವಿಷಯ:- ವಿಶೇಷ ಘಟಕ ಯೋಜನೆ ಕಾರ್ಯಕ್ರಮದಲ್ಲಿ ಮಂಜೂರಾದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 533 (660)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶೇಷ ಘಟಕ ಯೋಜನೆಗಾಗಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ 31-5-1996ರವರೆಗೆ ಮಂಜೂರಾದ ಹಣವೆಷ್ಟು?

ಆ) ಈ ಯೋಜನೆಯಡಿ ಖರ್ಚಾದ ಹಣ (ಕೇಂದ್ರ ಮತ್ತು ರಾಜ್ಯ ಯೋಜನೆಯ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)

ಇ) ಗಿರಿಜನ ಉಪಯೋಜನೆಯಡಿ ಮತ್ತು ವಿಶೇಷ ಘಟಕ ಯೋಜನೆಯಡಿ ಖರ್ಚು ಮಾಡದೆ ಉಳಿದ ಹಣ ಎಷ್ಟು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕಳೆದ ಮೂರು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆಯ ಮತ್ತು ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳಿಗಾಗಿ ರಾಜ್ಯ ಸರ್ಕಾರದಿಂದ ಮಂಜೂರಾದ ಹಣ ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ವಿಶೇಷ ಕೇಂದ್ರೀಯ ಸಹಯಧನ ವಿವರಗಳು ಈ ಕೆಳಕಂಡಂತಿವೆ:

ವರ್ಷ	ರಾಜ್ಯಯೋಜನೆ	ವಿಶೇಷ ಕೇಂದ್ರೀಯ ಸಹಾಯಧನ
ವಿಶೇಷ ಘಟಕ ಯೋಜನೆ. (ರೂ.ಲಕ್ಷಗಳಲ್ಲಿ)		
1993-94	28069.49	1282.71
1994-95	30353.03	1873.76
1995-96	33879.18	2220.047
1996-97	29413.43	-
ಗಿರಿಜನ ಉಪಯೋಜನೆ.		
1993-94	3729.96	439.76
1994-95	4639.69	486.45
1995-96	6386.83	460.47
1996-97	5094.75	-

ಆ) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ:-

ವರ್ಷ	ರಾಜ್ಯಯೋಜನೆ	ವಿಶೇಷ ಕೇಂದ್ರೀಯ ಸಹಾಯಧನ
ವಿಶೇಷ ಘಟಕ ಯೋಜನೆ. (ರೂ.ಲಕ್ಷಗಳಲ್ಲಿ)		
1993-94	25893.95	1282.71
1994-95	28921.91	1873.76
1995-96	31537.80	2220.047
1996-97	-	-
ಗಿರಿಜನ ಉಪಯೋಜನೆ.		
1993-94	3197.82	439.76
1994-95	4576.21	486.45

1995-96	5431.45	460.47
1996-97	-	-

ಇ) ವಿಶೇಷ ಘಟಕ ಯೋಜನೆಯಡಿ ಮತ್ತು ಗಿರಿಜನ ಉಪಯೋಜನೆಯಡಿ ಖರ್ಚು ಮಾಡದೆ ಬಾಕಿ ಉಳಿದಿರುವ ಹಣದ ವಿವರ ಈ ಕೆಳಕಂಡಂತಿದೆ:-

ವರ್ಷ	ರಾಜ್ಯಯೋಜನೆ	ವಿಶೇಷ ಕೇಂದ್ರೀಯ ಸಹಾಯಧನ
ವಿಶೇಷ ಘಟಕ ಯೋಜನೆ. (ರೂ.ಲಕ್ಷಗಳಲ್ಲಿ)		
1993-94	2175.54	-
1994-95	1481.12	-
1995-96	2341.38	-
1996-97	-	-
ಗಿರಿಜನ ಉಪಯೋಜನೆ.		
1993-94	532.24	-
1994-95	63.48	-
1995-96	955.86	-
1996-97	-	-

ವಿಷಯ:- ಬೆಳಗಾವಿ ಜಿಲ್ಲೆಯ ರೈತರಿಗೆ ಕಬ್ಬಿನ ಹಣ ಪಾವತಿಸಲು ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 534 (313)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ 1994-95 ಹಾಗೂ 1995-96ನೇ ಸಾಲುಗಳಲ್ಲಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಿದ ಕಬ್ಬಿನ ಪ್ರಮಾಣವೆಷ್ಟು?

ಆ) 1994-95ನೇ ಸಾಲಿನ ಕಬ್ಬಿನ ಅಂತಿಮ ಬಿಲ್ಲನ್ನು ರೈತರಿಗೆ ಪಾವತಿಸಲು ಸಾಧ್ಯವಿಲ್ಲವೆಂದು ಕಾರ್ಖಾನೆಗಳ ಆಡಳಿತ ವರ್ಗ ಹೇಳಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?